ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ-183 ಚಿಕ್ಕಲ್ಲಸಂದ್ರ, ಬೆಂಗಳೂರು

ಸಂ: ಸ.ಅ/ವಾ-183/ಪಿ.ಆರ್/06/2020-21 ದಿನಾಂಕ : 01-01-2021

## ವಾರ್ಡ್ ಸಮಿತಿಯ ಸಭೆಯ ನಡವಳಿಗಳು

ವಿಷಯ:- ಮಾನ್ಯ ಆಯುಕ್ತರು ಬಿ.ಬಿ.ಎಂ.ಪಿ ರವರ ಆದೇಶ ಸಂಖ್ಯೆ :ಬಿ12(58)ಪಿಆರ್/35/2020-21 ದಿನಾಕ :21-09-2020 ರವರ ಆದೇಶದಂತೆ ದಿನಾಂಕ :01-01-2021 ರಂದು ವಾರ್ಡ್ ಸಂಖ್ಯೆ-183 ಕೆ.ಇ.ಬಿ ಮುಖ್ಯರಸ್ತೆಯಲ್ಲಿರುವ ಯೋಗ ಕೇಂದ್ರದಲ್ಲಿ ನಡೆದ ವಾರ್ಡ್ ಸಮತಿ ಸಭೆಯ ನಡವಳಿಗಳು.

## ಸಭೆಗೆ ಹಾಜರಗಾಗಿದ್ದವರ ವಿವರಗಳು

| ಕ್ರ.ಸಂ | ಹೆಸರು ಶ್ರೀಮತಿ/ಶ್ರೀ | ಪದನಾಮ | ಹಾಜರಾತಿ |
|---|---|---|---|
| 1 | ಶ್ರೀ ನರಸಿಂಹಶಾಸ್ತ್ರೀ | ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿ | ಹಾಜರಿ |
| 2 | ಶ್ರೀ ಚೇತನ್ ಎನ್ ಎಸ್ ನಾಯಕ್ | ಸದಸ್ಯ ಕಾರ್ಯದರ್ಶಿ-183 ಮತ್ತು ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು, ಪದ್ಮನಾಭನಗರ ಉಪ ವಿಭಾಗ | ಹಾಜರಿ |
| 3 | ಶ್ರೀ ರಾಜಶೇಖರ್.ಸಿ.ಆರ್ | ಸಹಾಯಕ ಅಭಿಯಂತರರು, ಬೆಸ್ಕಾಂ ಎಸ್-15 ಉಪ ವಿಭಾಗ. | ಗೈರು ಹಾಜರಿ |
| 4 | ಶ್ರೀ ಶ್ರೀಧರ್ | ಸಹಾಯಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ) | ಹಾಜರಿ |
| 5 | ಶ್ರೀ ಗಂಗಾಧರಸ್ವಾಮಿ | ಹಿರಿಯ ಆರೋಗ್ಯ ಪರಿವೀಕ್ಷಕರು, ಬಿ.ಬಿ.ಎಂ.ಪಿ | ಹಾಜರಿ |
| 6 | ಶ್ರೀ ಸುರೇಶ್ | ಕಂದಾಯ ಪರಿವೀಕ್ಷಕರು, ಬಿ.ಬಿ.ಎಂ.ಪಿ. | ಹಾಜರಿ |
| 7 | ಶ್ರೀಮತಿ ಆರ್.ಅನಿತಾ | ಕಿರಿಯ ಆರೋಗ್ಯ ಪರಿವೀಕ್ಷಕರು, ಬಿ.ಬಿ.ಎಂ.ಪಿ | ಹಾಜರಿ |
| 8 | ಶ್ರೀ ದಿಲೀಪ್‌ಕುಮಾರ್.ಬಿ.ಓ, | ಸಹಾಯಕ ಅಭಿಯಂತರರು, (ತ್ಯಾ.ನೀ.ನಿ.ವಿ.ವ್ಯಾಲಿ) | ಗೈರು ಹಾಜರಿ |
| 9 | ಶ್ರೀಮತಿ ದಿವ್ಯ, | ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ) | ಗೈರು ಹಾಜರಿ |
| 10 | ಶ್ರೀಮತಿ ಐಶ್ವರ್ಯ, | ಸಹಾಯಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ) | ಗೈರು ಹಾಜರಿ |
| 11 | ಶ್ರೀ ಎಸ್. ವಿಜಯ್‌ಶೇಖರ್, | ಸಾರ್ವಜನಿಕರು | ಹಾಜರಿ |
| 12 | ಶ್ರೀ ಹರಿನಾಯ್ಡು, | ಸಾರ್ವಜನಿಕರು | ಹಾಜರಿ |
| 13 | ಶ್ರೀ ಹರಿಬಾಬು, | ಸಾರ್ವಜನಿಕರು | ಹಾಜರಿ |

ವಾರ್ಡ್ ಸಮಿತಿ ಸಂಚಾಲಕರು ಮತ್ತು ಸಹಾಯಕ ಕಾರ್ಯಪಾಲಕ ಅಭಿಯಂತರರು ಪದ್ಮನಾಭನಗರ ಉಪ ವಿಭಾಗ ಹಾಗೂ ವಾರ್ಡ್ ಸಂಖ್ಯೆ-183 ರವರಾದ ಶ್ರೀ ಚೇತನ್ ಎನ್ ಎಸ್ ನಾಯಕ್ ರವರು ಪ್ರಾರಂಭದಲ್ಲಿ ಉಪಸ್ಥಿತರಿದ್ದ ನೋಡೆಲ್ ಅಧಿಕಾರಿ ಮತ್ತು ವಾರ್ಡ್ ಸಮಿತಿಯ ಅಧ್ಯಕ್ಷರು ಮತ್ತು ಉಪಸ್ಥಿತರಿದ್ದ ಎಲ್ಲಾ ಅಧಿಕಾರಿಗಳು, ರೆಸಿಡೆನ್ಸ್ ವೆಲ್‌ಫೇರ್ ಆಸೋಸಿಯೇಶನ್ ಹಾಗೂ ಸಾರ್ವಜನಿಕರನ್ನು ಸ್ವಾಗತ ಕೋರಿದರು.

ಅಧ್ಯಕ್ಷರ ಅಪ್ಪಣೆ ಮೇರೆಗೆ ವಾರ್ಡ್ ಸಮಿತಿ ಸಭೆಯನ್ನು ಪ್ರಾರಂಭಿಸಲಾಯಿತು

ನೋಡೆಲ್ ಅಧಿಕಾರಿಗಳ ಜೊತೆಯಲ್ಲಿ ಸಭೆಯನ್ನು ಅಯೋಜಿಸಲಾಗಿದ್ದು, ಪ್ರಥಮವಾಗಿ ಈ ಹಿಂದಿನ ಸಭೆಯ ನಡವಳಿಗಳ ಬಗ್ಗೆ ಚರ್ಚಿಸಿ ಈ ಬಗ್ಗೆ ವಿವಿಧ ಇಲಾಖೆಗಳಿಂದ ಕೈಗೊಂಡ ಕ್ರಮಗಳನ್ನು ಸಭೆಯ ಗಮನಕ್ಕೆ ತರಲಾಯಿತು.

ಪಾಲಿಕೆ ವತಿಯಿಂದ ವಾರ್ಡ್‌ನ ವಿವಿಧ ಭಾಗಗಳಲ್ಲಿ ಪ್ರತಿ ದಿನ ಹೆಚ್ಚು ಕೋವಿಡ್ ಪರೀಕ್ಷೆಗಳನ್ನು ನಡೆಸುತ್ತಿದ್ದು, ಕಡಿಮೆ ಪಾಸಿಟೀವ್ ಕೇಸ್‌ಗಳು ಮಾತ್ರ ಪತ್ತೆಯಾಗುತ್ತಿರುವುದಾಗಿ ಶ್ರೀ ಗಂಗಾಧರಸ್ವಾಮಿ ಹಿರಿಯ ಆರೋಗ್ಯ ಪರಿವೀಕ್ಷಕರು, ಬಿ.ಬಿ.ಎಂ.ಪಿ ರವರು ತಿಳಿಸಿದಾಗ ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಯವರು ಮಾತನಾಡಿ ಕೋವಿಡ್-19 ರ ಬಗ್ಗೆ ಸಾರ್ವಜನಿಕರಲ್ಲಿ ಹೆಚ್ಚಿನ ಅರಿವು ಮೂಡಿಸಲು ಹಾಜರಿದ್ದ ಸಾರ್ವಜನಿಕ ಪ್ರಮುಖ ಮುಖಂಡ ಮತ್ತು ರೆಸಿಡೆನ್ಸ್ ವೆಲ್‌ಫೇರ್ ಅಸೋಸಿಯೇಶನ್ ರವನ್ನು ಕೋರಲಾಯಿತು. ಮುಂದುವರಿದು ಹಾಜರಿದ್ದ ಸಾರ್ವಜನಿಕರಲ್ಲಿ ಎಲ್ಲರೂ ಮುಖಗೌಸ್‌ಗಳನ್ನು ಕಡ್ಡಾಯವಾಗಿ ಧರಿಸಲು ಸೂಚಿಸಬೇಕೆಂದು ಕೋರಿದರು ಮತ್ತು ಮೊದಲನೇ ಅಧ್ಯತೆಯನ್ನು ಕೋವಿಡ್-19 ಗೆ ಒತ್ತು ನೀಡುವಂತೆ ಸೂಚಿಸಿರುತ್ತಾರೆ.

ಹಿಂದಿನ ವಾರ್ಡ್ ಸಮಿತಿ ಸಭೆಯಲ್ಲಿ ವಾರ್ಡ್ ಸಂಖ್ಯೆ-183 ರ ಕೆಳಗಿನ ಸಮಸ್ಯೆಗಳನ್ನು ಪ್ರಸ್ತಾಪಿಸಿ ಚರ್ಚಿಸಲಾಯಿತು.

1. ವಾರ್ಡ್ ಸಂಖ್ಯೆ-183 ರ ಶ್ರೀ ಎಸ್. ವಿಜಯ್‌ಶೇಖರ್ ರವರು ಮಾತಾನಾಡಿ ಭುವನೇಶ್ವರಿನಗರ ನಂದಿ ಎನ್‌ಕ್ಲೇಮ್ ಅಪಾರ್ಟ್‌ಮೆಂಟ್ ಮುಂಭಾಗದಲ್ಲಿರುವ ರಸ್ತೆಯನ್ನು ಕೂಡಲೇ ಸರಿ ಪಡಿಸಲು ಸಭೆಯಲ್ಲಿ ತಿಳಿಸಿದಾಗ ವಾರ್ಡ್ ಸಮಿತಿ ಸಂಚಾಲಕರು ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು ಚೇತನ್ ಎನ್ ಎಸ್ ನಾಯಕ್ ರವರು ಮಾತನಾಡಿ ನಂದಿ ಎನ್‌ಕ್ಲೇಮ್ ಅಪಾರ್ಟ್‌ಮೆಂಟ್ ಎದುರು ರಸ್ತೆಯ ಕಾಮಗಾರಿಯನ್ನು ಕೈಗೊಳ್ಳಲು ಗುತ್ತಿಗೆದಾರರಿಗೆ ಕಾರ್ಯಾದೇಶವನ್ನು ನೀಡಲಾಗಿದ್ದು, ಒಂದು ವಾರದ ಒಳಗೆ ಕಾಮಗಾರಿಯನ್ನು ಪೂರ್ಣಗೊಳಿಸುವುದಾಗಿ ಸಭೆಯ ಗಮನಕ್ಕೆ ತರಲಾಯಿತು.

ಇಂದಿನ ವಾರ್ಡ್ ಸಮಿತಿ ಸಭೆಯಲ್ಲಿ ಚರ್ಚಿಸಲಾದ ವಿಷಯಗಳು.

1) ವಾರ್ಡ್ ಸಂಖ್ಯೆ-183 ರ ನೋಡಲ್‌ಅಧಿಕಾರಿಯವರು ಮಾತನಾಡಿ ಮಾನ್ಯ ಆಯುಕ್ತರವರ ಸೂಚನೆಯಂತೆ ಮುಂಬರುವ ಆಯುವ್ಯಯದಲ್ಲಿ ನಮ್ಮ ಸಿಟಿ ಮತ್ತು ನಮ್ಮ ಬಜೆಟ್‌ಯೋಜನೆ ಅಡಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಶೌಚಾಲಯಗಳನ್ನು ನಿರ್ಮಿಸಲು ಒತ್ತು ನೀಡುವಂತೆ ನೆರೆದಿದ್ದ ಸಾರ್ವಜನಿಕರಿಗೆ ಸಭೆ ಮುಖಾಂತರ ತಿಳಿಸಿದರು ಹಾಗೂ ವಾರ್ಡ್ ಸೌಂದರ್ಯವನ್ನು ಹೆಚ್ಚಿಸುವ ಸಲುವಾಗಿ ವಾರ್ಡ್‌ನ ಮುಖ್ಯರಸ್ತೆಗಳಲ್ಲಿ ಸುಂದರ ಪಾದಚಾರಿ ಮಾರ್ಗಗಳನ್ನು ಮಾಡಿಸುವ ಸಲುವಾಗಿ ವಾರ್ಡ್ ವ್ಯಾಪ್ತಿಯಲ್ಲಿ ಶೌಚಾಲಯಗಳನ್ನು ನಿರ್ಮಿಸಲು ಅವಶ್ಯವಿರುವ ಸ್ಥಳಗಳನ್ನು ಗುರುತಿಸಿ ಪಟ್ಟಿ ಮಾಡಿ ಮುಂದಿನ ಸಭೆಗೆ ತಿಳಿಸಲು ಸಭೆಯಲ್ಲಿ ಕೋರಲಾಯಿತು.

   ಸಭೆಯಲ್ಲಿದ್ದ ಸಾರ್ವಜನಿಕರು ಪಾದಚಾರಿ ಮಾರ್ಗ ನಿರ್ಮಾಣಕ್ಕಾಗಿ ಭುವನೇಶ್ವರಿನಗರ ಮುಖ್ಯರಸ್ತೆಯನ್ನು ಸರ್ವಾನುಮತದಿಂದ ಆಯ್ಕೆ ಮಾಡಿ ನಮ್ಮ ಸಿಟಿ ಮತ್ತು ನಮ್ಮ ಬಜೆಟ್ ಯೋಜನೆ ಅಡಿ ಅನುದಾನವನ್ನು ಕೋರಲು ಸೂಚಿಸಲಾಯಿತು.

   ಕಾಕತೀಯನಗರ ಬಸ್ ನಿಲ್ದಾಣ ಮತ್ತು ಭುವನೇಶ್ವರಿನಗರ ಲಕ್ಷ್ಮಿ ದೇವಸ್ಥಾನದ ಹತ್ತಿರ ಸುಸಜ್ಜಿತ ಶೌಚಾಲಯವನ್ನು ನಮ್ಮ ಸಿಟಿ ಮತ್ತು ನಮ್ಮ ಬಜೆಟ್ ಯೋಜನೆ ಅಡಿ ಅನುದಾನವನ್ನು ಕೋರಲು ಸಾರ್ವಜನಿಕರು ಕೋರಿದರು..

2) ವಾರ್ಡ್‌ನಲ್ಲಿ ಬೋರ್‌ವೆಲ್‌ಗಳನ್ನು ಕೊರೆಯಲು ಈಗಾಗಲೇ ಟೆಂಡರ್ ಕರೆದು ಎಲ್-1 ಟೆಂಡರ್‌ದಾರರಿಗೆ ಕಾರ್ಯಾದೇಶವನ್ನು ನೀಡಲಾಗಿದ್ದು, ವಾರ್ಡ್‌ನಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುವ ಸ್ಥಳವನ್ನು ಸೂಚಿಸಿದ್ದಲ್ಲಿ ಬೋರ್‌ವೆಲ್ ಕೊರೆಯುವುದಾಗಿ ಸಭೆಗೆ ತಿಳಿಸಿದ್ದಾಗ ಸಭೆಯಲ್ಲಿದ್ದ ಸಾರ್ವಜನಿಕರು ಒಂದು ವಾರದೊಳಗೆ ಸ್ಥಳಗಳನ್ನು ಗುರುತಿಸಿ ತಿಳಿಸುವುದಾಗಿ ಸಭೆಗೆ ತಿಳಿಸಿದರು.

ಮಾನ್ಯ ಆಯುಕ್ತರವರ ಸೂಚನೆಯಂತೆ ಪ್ರತಿ ಒಂದನೇ ಹಾಗೂ ಮೂರನೇ ಶನಿವಾರದಂದು ವಾರ್ಡ್ ಸಮಿತಿ ಸಭೆಯನ್ನು ಆಯೋಜಿಸಲು ಹಾಗೂ ವಾರ್ಡ್‌ಗೆ ಸಂಬಂಧಿಸಿದ ಎಲ್ಲಾ ವಿಭಾಗದ ಅಧಿಕಾರಿಗಳು ಸಭೆಯಲ್ಲಿ ಹಾಜರಿರಲು ಕೋರುತ್ತಾ ಮತ್ತು ಮುಂದಿನ ಸಭೆಯಲ್ಲಿ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಶನ್ ರವರನ್ನು ಹೆಚ್ಚಿನ ಸಂಖ್ಯೆಯಲ್ಲಿ ಆಹ್ವಾನಿಸಲು ಸಂಚಾಲಕರಿಗೆ ಸೂಚಿಸಿ ಸಭೆಯಲ್ಲಿ ಯಾವುದೇ ಪ್ರಸ್ತಾವನೆ ಮಾಡದಿದ್ದ ಕಾರಣ ನೋಡಲ್ ಅಧಿಕಾರಿ/ಅಧ್ಯಕ್ಷರ ಅಪ್ಪಣೆ ಮೇರೆಗೆ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ನೋಡಲ್ ಅಧಿಕಾರಿ/ವಾರ್ಡ್ ಸಮಿತಿ ಅಧ್ಯಕ್ಷರು.

ವಾರ್ಡ್ ಸಮಿತಿ ಸಂಚಾಲಕರು